1) ಅನಧಿಕೃತ ನೀರಾವರಿ ಪಂಪ್‌ಸೆಟ್‌ಬಳಕೆದಾರರುಮಂಡಳಿ ಮಾದರಿಯಲ್ಲಿ ವಿದ್ಯುತ್ ರಚಿಸಿ ಕೊಂಡಿದ್ದಾರೆ. ಸಾಮಾನ್ಯ ವರ್ಗದವರಿಂದ ರೂ: 25000.00 ಹಾಗೂ ಪರಿಶ್ಚಿಜಾತಿ, ಪರಿಶಿಷ್ಟ ವರ್ಗದವರಿಂದ ರೂ: 1250.00ಗಳನ್ನು ಪಾವತಿಸಿಕೊಂಡು ಇತರೆ ಮಂಡಳಿಯ ನಿಯಮಗಳನ್ನು ಅವರು ಪಾಲಿಸಿದ ನಂತರ ಸಕ್ರಮಗೊಳಿಸಲಾಗುತ್ತಿದೆ.

2) ಒಂದು ವೇಳೆ ಮಂಡಳಿಯ ಮಾದರಿಯಲ್ಲಿ ವಿದ್ಯುತ್ ಮಾರ್ಗ ರಚಿಸಿ ಕೊಂಡಿಲ್ಲದಿದ್ದರೆ ಸಾಮಾನ್ಯ ವರ್ಗದವರಿಂದ ರೂ: 10,000.00 ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗವರಿಂದ ರೂ: 5000.00 ಅಥವಾ ಎಲ್. ಟಿ ಮಾರ್ಗ ವಿಸ್ತರಣೆಗೆ ತಗಲುವ ಅಂದಾಜು ಪಟ್ಟಿ ಇವೆರಡರಲ್ಲಿ ಯಾವುದು ಹೆಚ್ಚು ಅದನ್ನುಮಂಡಳಿಗೆ ಪಾವತಿಸಿಕೊಂಡು ಇತರೆ ನಿಯಮಗಳನ್ನು ಪಾಲಿಸಿದ ನಂತರ ಸಕ್ರಮಗೊಳಿಸಲಾಗುತ್ತಿದೆ.

ಭದ್ರಾ ಜಲಾಶಯ ನಿರ್ಮಾಣದಲ್ಲಿ ಜಮೀನು ಕಳೆದುಕೊಂಡವರಿಗೆ ಪರಿಹಾರ ನೀಡುವುದು.

662 (61) ಶ್ರೀ ಕೆ. ಎಸ್ ಈಶ್ವರಪ್ಪ(ಶಿವಮೊಗ್ಗ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಭದ್ರಾ ಜಲಾಶಯವನ್ನು ಯಾವಾಗ ನಿರ್ಮಿಸಲಾಯಿತು?

2. ಇದರಲ್ಲಿ ಜಮೀನು ಕಳೆದುಕೊಂಡ ಎಷ್ಟು ಜನರಿಗೆ ಪರಿಹಾರ ನೀಡಬೇಕಾಗಿದೆ?

3. ಪರಿಹಾರಕ್ಕಾಗಿ ಮೀಸಲಿಟ್ಟ ಒಟ್ಟು ಅಂದಾಜು ಮೊತ್ತವೆಷ್ಟು?

4. ಈ ಪರಿಹಾರವನ್ನು ಯಾವಾಗ ನೀಡಲಾಗುವುದು?

ಶ್ರೀ ಕೆ.ಎನ್‌ನಾಗೇಗೌಡ (ಬೃಹತ್ ನೀರಾವರಿ ಸಚಿವರು)

1. 1965ರಲ್ಲಿ ನಿರ್ಮಿಸಲಾಯಿತು.

2. ಒಟ್ಟು 686 ಜನರಿಗೆ ಪರಿಹಾರ ನೀಡಬೇಕಾಗಿದೆ.

3. ಪರಿಹಾರಕ್ಕಾಗಿ ಮೀಸಲಿಟ್ಟ ಒಟ್ಟು ಅಂದಾಜು ಮೊತ್ತ ರೂ. 137.703 ಲಕ್ಷ.

4. ಭೂ ಪರಿಹಾರಕ್ಕೆ ಆದ್ಯತೆ ನೀಡಿ ಹಣ ಬಿಡುಗಡೆ ಮಾಡಲಾಗುವುದು.

ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿ.

663(63) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಣ್ಣ ನೀರಾವರಿ ಮತ್ತುಅಂತರ್ಜಲ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಕೈ ಗೊಂಡ ಕಾರ್ಯಕ್ರಮಗಳಾವುವು;

ಆ) ರಾಜ್ಯದಲ್ಲಿ ಅಂತರ್ಜಲ ಮಟ್ಟವು ಕುಸಿಯುತ್ತಿದೆಯೆಂದು ಗುರುತಿಸಿಲಾದ ತಾಲ್ಲೂಕುಗಳಾವುವು;

ಇ) ಅಂತರ್ಜಲ ಅಭಿವೃದ್ಧಿಗಾಗಿ ಈ ತಾಲ್ಲೂಕುಗಳಿಗಾಗಿ 1996-97 1997-98 ಹಾಗೂ 1998-99 ನೇ ಸಾಲಿಗಾಗಿ ಬಿಡುಗಡೆ ಮಾಡಿರುವ ಹಣವೆಷ್ಟು; ಹಾಗೂ ಖರ್ಚು ಮಾಡಿರುವ ಹಣವೆಷ್ಟು? (ಪೂರ್ಣ ವಿವರ ತಾಲ್ಲೂಕುವಾರು ನೀಡುವುದು)

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ವೃದ್ಧಿಪಡಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು, ಅಂತರ್ಜಲ ಮರು ಪೂರೈಕೆಯ ರಚನೆಗಳಾದ ಅಡ್ಡತಡೆ ಗೋಡೆ, ಇಂಗುಬಾವಿ, ಕೃತಕ ಡೈಕ್, ಗಲ್ಲಿ ಪ್ಲಗ್ಗಿಂಗ್ ಇತ್ಯಾದಿ ರಚನೆಗಳನ್ನು ಪ್ರಯೋಗಾತ್ಮಕವಾಗಿ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಆ) ರಾಜ್ಯದಲ್ಲಿ 21 ತಾಲ್ಲೂಕುಗಳನ್ನು 'ಕಪ್ಪು' ಮತ್ತು 22 ತಾಲ್ಲೂಕುಗಳನ್ನು 'ಬೂದು' ಪ್ರದೇಶಗಳೆಂದು ಅಂತರ್ಜಲದ ಬಳಕೆಯ ಆಧಾರದ ಮೇಲೆ ನಿರ್ಧರಿಸಲಾಗಿದೆ. ಈ ಒಟ್ಟು 43 ತಾಲ್ಲೂಕುಗಳಲ್ಲಿ ಅಂತರ್ಜಲವು ಕುಸಿಯುತ್ತಿರುವುದನ್ನು ಗುರುತಿಸಲಾಗಿದೆ. ತಾಲ್ಲೂಕುವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಇ) ಅಂತರ್ಜಲ ಅಭಿವೃದ್ಧಿಗಾಗಿ, ಕಪ್ಪು ಮತ್ತು ಬೂದು ತಾಲ್ಲೂಕುಗಳಿಗೆ, ಈ ಕೆಳಗಿನಂತೆ ಹಣ ಬಿಡುಗಡೆ ಮಾಡಲಾಗಿದ್ದು, ಬಿಡುಗಡೆ ಮಾಡಿದ ಪೂರ್ತಿ ಹಣ ಖರ್ಚು ಮಾಡಲಾಗಿದೆ.

1. 1996-97 - ರೂ. 12.85 ಲಕ್ಷ
2. 1997-98 - ರೂ. 125.92 ಲಕ್ಷ
3. 1998-99 - ರೂ. 71.59 ಲಕ್ಷ

ತಾಲ್ಲೂಕುವಾರು ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಕಪ್ಪು ಮತ್ತು ಬೂದು ಪ್ರದೇಶಗಳೆಂದು ವರ್ಗೀಕರಿಸರುವ ತಾಲ್ಲೂಕುಗಳ ಪಟ್ಟಿ

6.A

ಕ್ರಮ ಸಂಖ್ಯೆ	ಜಿಲ್ಲೆ	ಬೂದು ಪ್ರದೇಶ	ಕಪ್ಪು ಪ್ರದೇಶ	ಷರಾ
1.	ಬೆಂಗಳೂರು	1. ದೊಡ್ಡಬಳ್ಳಾಪುರ	1. ಆನೇಕಲ್	
		2. ರಾಮನಗರ	2. ಬೆಂಗಳೂರು ಉತ್ತರ	
			3. ಬೆಂಗಳೂರು ದಕ್ಷಿಣ	
			4. ಚನ್ನಪಟ್ಟಣ	
			5. ದೇವನಹಳ್ಳಿ	
			6. ಹೊಸಕೋಟೆ	
2.	ಬೆಳಗಾಂ	1. ಅಥಣಿ	1. ಚಿಕ್ಕೋಡಿ	
		2. ಬೈಲಹೊಂಗಲ	2. ಹುಕ್ಕೇರಿ	
3.	ಬಳ್ಳಾರಿ	1. ಹೆಚ್. ಬಿ. ಹಳ್ಳಿ		
4.	ಬೀದರ್	1. ಬೀದರ್		
5.	ಬಿಜಾಪುರ	1. ಬಾಗೇವಾಡಿ	1. ಇಂಡಿ	
		2. ಬಿಜಾಪುರ		
6.	ಚಿತ್ರದುರ್ಗ	1. ಚಳ್ಳಕೆರೆ		
		2. ಚಿತ್ರದುರ್ಗ		
7.	ದಕ್ಷಿಣ ಕನ್ನಡ	1. ಬೆಲ್ತಂಗಡಿ	1. ಬಂಟವಾಳ	
			2. ಸುಳ್ಯಾ	
8.	ಹಾಸನ	1. ಅರಸೀಕೆರೆ	1. ಚನ್ನರಾಯಪಟ್ಟಣ	
9.	ಕೋಲಾರ	1. ಚಿಂತಾಮಣಿ	1. ಚಿಕ್ಕಬಳ್ಳಾಪುರ	
		2. ಗೌರಿಬಿದನೂರ್	2. ಕೋಲಾರ	
		3. ಮುಳಬಾಗಿಲ್	3. ಮೂಲೂರು	
		4. ಶಿಡ್ಲಘಟ್ಟ		
		5. ಶ್ರೀನಿವಾಸಪುರ		
10.	ಮೈಸೂರು	1. ಚಾಮರಾಜನಗರ	1. ಕೊಳ್ಳೇಗಾಲ	
11.	ರಾಯಚೂರು	1. ಕುಷ್ಟಗಿ		
12.	ತುಮಕೂರು	1. ಕೊರಟಗೆರೆ	1. ಗುಬ್ಬಿ	
		2. ಕುಣಿಗಲ್	2. ಪಾವಗಡ	
			3. ಪಟೂರು	
			4. ತುಮಕೂರು	
			5. ತುರುವೇಕೆರೆ	
	ಒಟ್ಟು	22	21	

ಅನುಬಂಧ-2

1996-97, 1997-98 ಮತ್ತು 1998-99ನೇ ಸಾಲಿನ ಅನುದಾನ ಮತ್ತು ವೆಚ್ಚದ ವಿವರಗಳ ತೋರು ಪಟ್ಟಿ.

ಕ್ರಮಸಂಖ್ಯೆ	ಜಿಲ್ಲೆಗಳು	ತಾಲ್ಲೂಕು	ಅನುದಾನ/ವೆಚ್ಚ
	I. 96-97		
1.	ಬೆಂಗಳೂರು	ಹೊಸಕೋಟೆ	5.00
2.	ಹಾಸನ	ಚನ್ನರಾಯಪಟ್ಟಣ	2.50
3.	ಕೋಲಾರ	ಕೋಲಾರ	5.35
			12.95
	II. 97-98		
1.	ಬೆಂಗಳೂರು	ದೇವನಹಳ್ಳಿ	20.24
		ಆನೇಕಲ್ಲು	64.08
		ಹೊಸಕೋಟೆ	9.76
		ದೊಡ್ಡಬಳ್ಳಾಪುರ	10.83
2.	ಬಿಜಾಪುರ	ಇಂಡಿ	5.35
3.	ಚಿತ್ರದುರ್ಗ	ಚಲ್ಲಕೆರೆ	3.16
4.	ದಕ್ಷಿಣಕನ್ನಡ	ಬಂಟವಾಳ್	3.00
5.	ಕೋಲಾರ	ಚಿಕ್ಕಬಳ್ಳಾಪುರ	5.60
6.	ರಾಯಚೂರು	ಕುಷ್ಟಗಿ	2.00
7.	ತುಮಕೂರು	ಗುಬ್ಬಿ	1.90
			125.92
	III-98-99		
1.	ಬೆಂಗಳೂರು	ಆನೇಕಲ್	0.84
2.	ತುಮಕೂರು	ಮಧುಗಿರಿ	1.86
3.	ಚಿತ್ರದುರ್ಗ	ಚಿತ್ರದುರ್ಗ	12.94
4.	ಬೆಳಗಾಂ	ಚಿಕ್ಕೋಡಿ	12.50
			28.14
1.	ಬೆಂಗಳೂರು	ದೇವನಹಳ್ಳಿ	7.71
2.	ತುಮಕೂರು	ತುಮಕೂರು	7.35
3.	ಚಿತ್ರದುರ್ಗ	ಚಳ್ಳಕೆರೆ	28.39
			43.45

ಕರಡು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.